**ಕಲ್ಲೇಶಿ:** ನನ್ನ ಮಗನನ್ನು ಮೂರು ತಿಂಗಳಿನಿಂದ ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ.
**ತಿಪ್ಪೇಶಿ:** ಯಾಕೆ, ಏನಾಯ್ತು?
**ಕಲ್ಲೇಶಿ:** ಒಮ್ಮೆ ಆತ ಜಾತ್ರೆಯಲ್ಲಿ ಕಳೆದು ಹೋಗಿದ್ದ. ಆಗ ಅವನನ್ನು ಹುಡುಕಲು ಫೋಟೊ ಸಮೇತ ಹಲವು ವಾಟ್ಸ್ಆ್ಯಪ್ ಗ್ರೂಪ್‌ಗಳಲ್ಲಿ ಹಾಕಿದ್ದೆ. ಹುಡುಕಿಕೊಟ್ಟರೆ ಐದು ಲಕ್ಷ ಬಹುಮಾನ ಕೊಡುವುದಾಗಿಯೂ ಬರೆದಿದ್ದೆ. ಅರ್ಧ ಗಂಟೆಯಲ್ಲೇ ಅವನನ್ನು ವಾಟ್ಸ್ಆ್ಯಪಿಗರು ಹುಡುಕಿ, ಕರೆದುಕೊಂಡು ಬಂದಿದ್ದರು.
**ತಿಪ್ಪೇಶಿ:** ಒಳ್ಳೆ ಕೆಲಸಾನೇ ಮಾಡಿದ್ದಾರಲ್ಲ. ಅದಕ್ಕೂ ನಿನ್ನಮಗ ಸ್ಕೂಲ್‌ಗೆ ಹೋಗದಿರುವುದಕ್ಕೂ ಏನ್ ಸಂಬಂಧ.
**ಕಲ್ಲೇಶಿ:** ಆಗ ಕಳುಹಿಸಿದ್ದ ಮೆಸೇಜ್ ಈಗಲೂ ಫಾರ್ವರ್ಡ್ ಆಗ್ತಿದೆ. ಅದನ್ನು ನೋಡುವ ಜನರು ಗುಂಡನನ್ನು ಎಲ್ಲಿ ಕಂಡರೂ ಮನೆಗೆ ಕರೆದುಕೊಂಡು ಬರುತ್ತಿದ್ದಾರೆ.

***

ಗುಂಡನ ಹಾರ್ಟ್ ಸರ್ಜರಿ ಆದಮೇಲೆ ಆತನ ಹೆಂಡತಿ ಸರ್ಜನ್‌ಗೆ ಹೀಗೆ ಕೇಳಿದ್ಲು...
**ಹೆಂಡತಿ:** ಡಾಕ್ಟರ್ ಸಾಹೇಬ್ರೆ, ಇವರ ಹೃದಯದಲ್ಲಿ ಬೇರೆ ಹುಡುಗಿ ಇದ್ಳಾ?
**ಡಾಕ್ಟರ್:** ಇದ್ಳು. ಆಕೆಯನ್ನು ಬೈಪಾಸ್ ಮಾಡಿದ್ದೀನಿ ಡೋಂಟ್ ವರಿ.

***

**ಸುಬ್ಬಿ:** ರಾಣಿ ತರಹ ನೋಡಿಕೊಳ್ಳುತ್ತೇನೆ ಅಂತ ನನ್ನನ್ನು ಮದುವೆಯಾಗಿ, ಇಲ್ಲಿ ಕಸ ಮುಸುರೆ ಬಳಿಯೋಕೆ ಹಾಕಿದ್ದೀಯಲ್ಲ, ಇದು ಸರಿಯಾ?
**ಸುಬ್ಬ:** ಸರಿ ಕಣೇ... ಇದು ರಾಜರ ಕಾಲವಲ್ಲ. ಈಗ ರಾಜರು ಇರುವುದಿಲ್ಲ. ನಿನ್ನನ್ನು ರಾಣಿಯಂತೆ ನೋಡಿಕೊಳ್ಳೋಕೆ ನಾನು ರಾಜನೂ ಅಲ್ಲ. ಹೀಗಿರುವಾಗ ರಾಣಿ ಆಗ್ತೀನಿ ಅಂತ ನೀನು ಹೇಗೆ ಅಂದುಕೊಂಡೆ?

***

**ಗುಂಡ:** (ಗುಂಡನ ಕಾಲಿಗೆ ಏಟಾಗಿತ್ತು) 'ಒಂದೇ ತಿಂಗಳಿನಲ್ಲಿ ನಡೆದಾಡುವಂತೆ ಮಾಡುತ್ತೇನೆ' ಎಂದಿದ್ರು ಡಾಕ್ಟರ್.
**ತಿಮ್ಮ:** ಹಾಗೇ ಮಾಡಿದ್ರಾ?
**ಗುಂಡ:** ಮಾಡಿದ್ರು. ಆದರೆ, ಆಮೇಲೆ ಅವರು ಕೊಟ್ಟ ಬಿಲ್ ಪಾವತಿಸಲು ನನ್ನ ಹೊಸ ಕಾರನ್ನೇ ಮಾರಬೇಕಾಯಿತು. ಈಗ ವಾಸ್ತವವಾಗಿ ನಾನು ಎಲ್ಲಾ ಕಡೆ ನಡೆದಾಡಿಕೊಂಡು ಹೋಗುತ್ತಿದ್ದೇನೆ.

***


**ಕಲ್ಲೇಶಿ:** 'ಶರಬತ್ತು, ಎಳನೀರು, ಮಜ್ಜಿಗೆ ಇವೆಲ್ಲಾ ಶರೀರ ತಂಪು ಮಾಡುತ್ತವೆ' ಅನ್ನೋದು ಭ್ರಮೆ ಕಣೋ ಮಲ್ಲೇಶಿ, ಭ್ರಮೆ.
**ಮಲ್ಲೇಶಿ:** ಮತ್ತೆ?
**ಕಲ್ಲೇಶಿ:** ಹೆಂಡತಿ ಶಾಂತವಾಗಿದ್ದರೆ ಅದರಷ್ಟು ತಂಪು ಇನ್ನೊಂದಿಲ್ಲ.

***

**ಟೀಚರ್:** ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು... ಇದೇ ರೀತಿಯ ಇನ್ನೊಂದು



ನಮ್ಮನ್ನು ತುಂಬಾ ಅಪಾಯಕಾರಿ ಅನ್ನುವ ಹಾಗೆ 'ಡೆಂಗಿ' ಲೇಖನದಲ್ಲಿ ಬರೆದಿದ್ದಾರೆ !




**ಗೆಳೆಯ:** ನಿನಗಾದ ಅತ್ಯಂತ ಬೇಸರದ ವಿಚಾರದ ಬಗ್ಗೆ ಹೇಳು?
**ಗುಂಡ:** ನಾನು ಹೈಸ್ಕೂಲ್‌ನಲ್ಲಿದ್ದಾಗ ಲೆಕ್ಕದಲ್ಲಿ ತುಂಬಾ ದಡ್ಡ ಇದ್ದೆ. ಒಂದು ಸಲ ಗಣಿತದಲ್ಲಿ 90 ಮಾರ್ಕ್ಸ್ ತಗೊಂಡಿದ್ದೆ. ಪ್ರೋಗ್ರೆಸ್ ಕಾರ್ಡ್ ನೋಡಿ ಅಪ್ಪ ತುಂಬ ಖುಷಿಪಟ್ಟು ನನ್ನನ್ನ ಹೊಗಳುತ್ತಾರೆ ಅಂತ ಅಂದುಕೊಂಡಿದ್ದೆ. ಆದರೆ, ಅವರು ನೀನು ಒಂಬತ್ತರ ಪಕ್ಕದಲ್ಲಿ ಸೊನ್ನೆ ಸೇರಿಸಿ. ತೊಂಬತ್ತು ಮಾಡಿದ್ದೀಯ ಅಂತ ಅನುಮಾನ ಪಟ್ಟಿದ್ದರು. 'ಸೊನ್ನೆ ಸೇರಿಸಿಲ್ಲ' ಅಂತ ಎಷ್ಟೇ ಹೇಳಿದರೂ ಅವರು ಕೇಳಲಿಲ್ಲ. ಅದು ನನಗೆ ತುಂಬಾನೇ ಬೇಸರ ತರಿಸಿತ್ತು.
**ಗೆಳೆಯ:** ಯಾಕೆ?
**ಗುಂಡ:** ಅವತ್ತು ಸತ್ಯವಾಗಲೂ ಸೊನ್ನೆ ಸೇರಿಸಿರಲಿಲ್ಲ. ನಾನು ಸೇರಿಸಿದ್ದು ಒಂಭತ್ತು.

ಉದಾಹರಣೆ ಕೊಡು ಗುಂಡ.
**ಗುಂಡ:** ಎಣ್ಣೆ ಬಿಟ್ಟು ನೀರಿನಲ್ಲಿ ಬೊಂಡ ಬೇಯದು...

***

**ನ್ಯಾಯಾಧೀಶ:** ಹೋಗಿ ಹೋಗಿ ದೇವಸ್ಥಾನಕ್ಕೆ ಕನ್ನ ಹಾಕಿದ್ದಿಲ್ಲಯ್ಯ?
**ಕಳ್ಳ:** ಯಾವ್ದೆ ಕೆಲಸವನ್ನಾಗಲಿ, ದೇವ್ರಿಂದ ತಾನೇ ಶುರು ಹಚ್ಕೊಬೇಕು. ಅದ್ಕೆ ಅಲ್ಲಿಂದಲೇ ಶುರು ಮಾಡ್ದೆ.

***

**ಕಲ್ಲೇಶಿ:** ಪ್ರೀತಿಗೂ ಮದುವೆಗೂ ಏನು ವ್ಯತ್ಯಾಸ?
**ಮಲ್ಲೇಶಿ:** ಪ್ರೀತಿ ಅಂದರೆ ಬಸ್‌ನಲ್ಲಿ ಪ್ರಯಾಣ ಮಾಡಿದ ಹಾಗೇ. ಮದ್ವೆ ಅಂದ್ರೆ ವಿಮಾನದಲ್ಲಿ ಪ್ರಯಾಣಿಸಿದ ಹಾಗೇ.
**ಕಲ್ಲೇಶಿ:** ಅದ್ಹೇಗ್ಲಾ?
**ಮಲ್ಲೇಶಿ:** ಬಸ್‌ನಲ್ಲಾದರೆ ಮಾರ್ಗದ ಮಧ್ಯೆ ಎಲ್ಲಿಯಾದ್ರೂ ಇಳ್ಕೊಬಹುದು. ಅದೇ ವಿಮಾನದಿಂದ ಇಳಿಯೋಕೆ ಆಗುತ್ತಾ? ಮದ್ವೆನೂ ಹಾಗೆ

***

**ಮಿಸ್:** ವಿದೇಶಕ್ಕೆ ಹೋದ ಪ್ರಥಮ ಮಹಿಳೆ ಯಾರು?
**ಗುಂಡ:** ಸೀತಾ ಮಿಸ್, ಶ್ರೀಲಂಕಾಕ್ಕೆ ಹೋಗಿದ್ದು.

***

**ಹುಡುಗಿ:** ಚೆನ್ನೈ ಎಕ್ಸ್‌ಪ್ರೆಸ್ ಎಷ್ಟೊತ್ತಿಗೆ ಸರ್?
**ಟಿಸಿ:** ಐದು ಗಂಟೆಗೆ.
**ಹುಡುಗಿ:** ರಾಜಧಾನಿ ಎಕ್ಸ್‌ಪ್ರೆಸ್?
**ಟಿಸಿ:** 6.30ಕ್ಕೆ
**ಹುಡುಗಿ:** ಪ್ಯಾಸೆಂಜರ್ ರೈಲು ಬರುವುದು ಎಷ್ಟು ಗಂಟೆಗೆ?
**ಟಿಸಿ:** 8 ಗಂಟೆಗೆ ಕಣಮ್ಮ.
**ಹುಡುಗಿ:** ಮತ್ತೆ ಗೂಡ್ಸ್ ಗಾಡಿ?
**ಟಿಸಿ:** 9 ಗಂಟೆಗೆ, ಅದ್ಸರಿ ನೀನು ಎಲ್ಲಿಗೆ ಹೋಗಬೇಕು?
**ಹುಡುಗಿ:** ಎಲ್ಲಿಗೂ ಇಲ್ಲ ಸರ್, ರೈಲ್ವೆ ಟ್ರ್ಯಾಕ್ ಮೇಲೆ ನಿಂತು ಸೆಲ್ಫಿ ತಗೋಬೇಕಿತ್ತು. ಅದ್ಕೆ ಕೇಳ್ದೆ.

***

**ಡಾಕ್ಟರ್:** ಮುಖ ಇಷ್ಟೊಂದು ಡ್ಯಾಮೇಜ್ ಹೇಗಾಯ್ತು?
**ಗುಂಡ:** ಸೊಳ್ಳೆ ಕಡಿದಿದ್ರಿಂದ ಸಾರ್.
**ಡಾಕ್ಟರ್:** ಸೊಳ್ಳೆ ಕಡಿದ್ರೆ ಇಷ್ಟೊಂದು ಗಾಯಗಳಾಗುತ್ತೇನಯ್ಯ?
**ಗುಂಡ:** ಇಲ್ಲಾ. ಸೊಳ್ಳೆ ನನ್ನ ಮುಖದ ಮೇಲೆ ಕೂತಿತ್ತು. ನನ್ನ ಹೆಂಡತಿ ಸೊಳ್ಳೆಯನ್ನು ಸಾಯಿಸೋಕೆ ಲಟ್ಟಣಿಗೆಯಿಂದ ಬೀಸಿದ ಪರಿಣಾಮ ಹೀಗಾಯ್ತು ಸರ್.

***

**ಚಿಂಟು:** ನಾನು ಕೋತಿ ತರಹ ಇದ್ದೀನಿ ಅಂತ ಬಬ್ಲಿಗೆ ಹೇಳಿದೆಯಂತೆ.
**ಬಂಟಿ:** ಇಲ್ಲಪ್ಪ, ನಾನು ಹಾಗೇ ಹೇಳೆ ಇಲ್ಲ. ಕೋತಿ ನಿನ್ನ ತರಹ ಇರುತ್ತೆ ಅಂತ ಹೇಳ್ದೆ ಅಷ್ಟೇ.

ಸಂಗ್ರಹ: ಶರದ ಕುಲಕರ್ಣಿ, ಬೀದರ್